# ನಾನೇ ಸತ್ಯ ಎಂಬ ಸ್ಫೂರ್ತಿಯ ಯಶೋಗಾಥೆ



ನಟಿ ಗೌತಮಿ ಜಾದವ್ ಜೊತೆ ಆಟೊ ಸೌಮ್ಯಾ, ಉಮಾ, ಸುಮಾ, ರೂಪಾ

◆ **'ನಾನು ಸತ್ಯ– ನಾನೇ ಸತ್ಯ' ಎಂಬ ಸ್ಫೂರ್ತಿಯ ಮಾತು ಹುಟ್ಟಿದ ಬಗೆ ಹೇಗೆ?**

'ಸತ್ಯ' ಮೊದಲು ತಮಿಳು, ತೆಲುಗು ಮತ್ತು ಮಲೆಯಾಳಂನಲ್ಲಿ ಬಂತು. ಕರ್ನಾಟಕದಲ್ಲಿ ಬೇರೆ ಬೇರೆ ಭಾಷೆಯಲ್ಲಿ ಅದನ್ನು ನೋಡಿದ ವೀಕ್ಷಕರು ಸಿಕ್ಕರು. ಇದು ಇದರ ಯಶಸ್ಸಿನ ಮೊದಲ ಹಂತ. ಇಲ್ಲಿನ ಕಥಾನಾಯಕಿ 'ಸತ್ಯ' ತೆರೆಯ ಮೇಲೆ ಮಾತ್ರವಲ್ಲ ಎಲ್ಲೆಡೆ ಇರುತ್ತಾಳೆ ಎನ್ನುವ ಸತ್ಯ ಶೋಧವನ್ನು ನಮ್ಮ ತಂಡ ಮಾಡಿದೆ. ಝೀ ಕನ್ನಡ ಸತ್ಯ (ಗೌತಮಿ ಜಾದವ್) ಮನರಂಜನೆಯ ನೆಲೆಯಲ್ಲಿಯೂ ಸ್ಫೂರ್ತಿಯಾಗುತ್ತಾಳೆ. ನಮ್ಮ ಸುತ್ತಮುತ್ತ ಇಂತಹ ಸಾಕಷ್ಟು ನಿದರ್ಶನಗಳು ಇದ್ದರೂ ಗುರುತಿಸುವ ಯತ್ನ ಅಷ್ಟಾಗಿ ಆಗಿರುವುದಿಲ್ಲ. ಅದನ್ನು ಗುರುತಿಸುವ ನಿಟ್ಟಿನಲ್ಲಿ ನಾವು ಮುಂದಾದೆವು. ರಾಜ್ಯವ್ಯಾಪಿ 130 ಯಶೋಗಾಥೆಗಳು ಸಿಕ್ಕವು. ಕಥೆಯ ಪಾತ್ರವನ್ನೂ ಮೀರಿ ನಿಲ್ಲಬೇಕು ಎನ್ನುವ ದೃಷ್ಟಿಯಿಂದ ಅದರಲ್ಲಿ ಹತ್ತು ಕಥೆಗಳನ್ನು ಅಂತಿಮವಾಗಿ ಆಯ್ಕೆ ಮಾಡಿಕೊಂಡಿದ್ದೇವೆ. ಅದರಲ್ಲಿ 'ಸ್ವಿಗ್ಗಿ' ವಿತರಕಿ ಉಮಾ, ಆಟೋಚಾಲಕಿ ಮೈಸೂರಿನ ಸೌಮ್ಯ, ಪೆಟ್ರೋಲ್ ಬಂಕ್‌ನಲ್ಲಿ ಕರ್ತವ್ಯ ನಿರ್ವಹಿಸುವ ಸೌಮ್ಯ, ರುಕ್ಮಿಣಿ ಮತ್ತು ಸುಮಾ ಅವರ ಕಾಯಕದ ಬದುಕನ್ನು ಚಿತ್ರೀಕರಿಸಿ ಝೀ ಕನ್ನಡ ತನ್ನ ಅಧಿಕೃತ ಫೇಸ್ ಬುಕ್ ಪುಟ ಹಾಗೂ ಯೂಟ್ಯೂಬ್ ಚಾನೆಲ್‌ನಲ್ಲಿ ಪ್ರಸಾರ ಮಾಡಿತು.

ಇಲ್ಲಿ ಒಬ್ಬೊಬ್ಬರದು ಒಂದೊಂದು ಕಥೆ. ಉಮಾ ಸ್ವಿಗ್ಗಿಯಲ್ಲಿ ಕೆಲಸಕ್ಕೆ ಸೇರಿದ ನಂತರ ಅನೇಕ ಸವಾಲುಗಳನ್ನು ಎದುರಿಸಿದ್ದಾರೆ. ಕೆಲವೇ ದಿನಗಳಲ್ಲಿ ಅಪಘಾತಕ್ಕೆ ತುತ್ತಾಗುತ್ತಾರೆ. ಆ ನಂತರ ನಡೆಯಲು ಸಾಧ್ಯ ಆಗದಷ್ಟು ನೋವನ್ನು ಅನುಭವಿಸುತ್ತಾರೆ. ಝೀ ಗುರುತಿಸಿದ ನಂತರ ಉಮಾ ಟೀಂ ಲಿಡರ್ ಆಗಿದ್ದಾರೆ. ಅವರ ಉಸ್ತುವಾರಿಯಲ್ಲಿ 12 ಯುವತಿಯರು ವಿತರಕರಾಗಿ ಕೆಲಸ ಮಾಡುತ್ತಿದ್ದಾರೆ.

ಆಟೊರಾಣಿ ಖ್ಯಾತಿಯ ಸೌಮ್ಯ ಪದವೀಧರೆ. ಇಂಗ್ಲಿಷ್ ಬರುತ್ತದೆ ಶಾಸ್ತ್ರೀಯ ನೃತ್ಯ ಮಾಡುತ್ತಾರೆ. ಒಂದು ವರ್ಷದ ಮಗು ಇದೆ. ಏಕಮಾತ್ರ ಪೋಷಕಿಯಾಗಿ ಆಟೊ ಓಡಿಸುತ್ತಾರೆ. ಇವರ ಬದುಕು ಸತ್ಯ ಪಾತ್ರದ ಪಡಿಯಚ್ಚಿನಂತೆ ಇದೆ. ಮಹಿಳೆ ಏಕೆ ಎಲ್ಲ ರೀತಿಯ ಕೆಲಸ ಮಾಡಲು ಸಾಧ್ಯ ಇಲ್ಲ? ಎನ್ನುವ ಪ್ರಶ್ನೆಯನ್ನು ಇಟ್ಟುಕೊಂಡ ನಮ್ಮ ಅಧ್ಯಯನಕ್ಕೆ ಉತ್ತರ ಹೀಗೆ ಸಿಕ್ಕಿದೆ.



**ಶ್ರೀರಾಮ್ ಬಿ.ಆರ್.**
**ಝೀ ಕನ್ನಡ ಹಿರಿಯ ಬ್ರ್ಯಾಂಡ್ ವ್ಯವಸ್ಥಾಪಕ**

◆ **ವೀಕ್ಷಕರಿಂದ ಎಂತಹ ಪ್ರತಿಕ್ರಿಯೆ ವ್ಯಕ್ತವಾಗಿದೆ?**

ಝೀ ಕನ್ನಡದ 'ಬಯಸಿದ ಬಾಗಿಲು ತೆರೆಯೋಣ' ಎಂಬ ಘೋಷವಾಕ್ಯದಂತೆ ಇದೆ ಎಂಬ ಪ್ರತಿಕ್ರಿಯೆ ವ್ಯಕ್ತವಾಗಿದೆ. ನೈಜ ಜೀವನದಲ್ಲಿ ಅನೇಕರು ನಾಯಕಿಯರಂತೆ ಇದ್ದಾರೆ. ಇದನ್ನು ಧಾರಾವಾಹಿಯಂತೆ ನೋಡದೆ ತಮ್ಮ ಸುತ್ತ ನಡೆಯುವ ವರ್ತಮಾನದಂತೆ ನೋಡುತ್ತಾರೆ. ನಮಗೆ ಟೀವಿಯಲ್ಲಿ ಕಾರ್ಯಕ್ರಮ ಮಾಡಲು ಸಾಧ್ಯ ಆಗಲಿಲ್ಲ. ಅದಾಗಿದ್ದರೆ ಅದರ ಪರಿಣಾಮ ಇನ್ನೂ ಚೆನ್ನಾಗಿರುತ್ತಿತ್ತು. ನಮ್ಮ ಉದ್ದೇಶ ಸ್ವಾಭಿಮಾನದ ಬದುಕಿಗೆ ಹಲವು ದಾರಿ ಎನ್ನುವುದನ್ನು ಹೇಳುವ ಜೊತೆಗೆ ಹೆಣ್ಣನ್ನು ಗೌರವಿಸಬೇಕು. ಸ್ವಾವಲಂಬನೆಗೆ ಪ್ರೋತ್ಸಾಹಿಸಬೇಕು ಎನ್ನುವುದಾಗಿತ್ತು. ಅದು ಒಂದಿಷ್ಟು ಯಶಸ್ವಿಯಾಗಿದೆ.

◆ **'ಸತ್ಯ'ದ ಕಾಲ್ಪನಿಕ ಕಥೆಗೆ ವಾಸ್ತವದ ನೈಜ ಘಟನೆಗಳ ಎಳೆಯನ್ನು ಜೋಡಿಸಬಹುದಾ?**

ಈಗ ಕಥೆ ಬೇರೆ ತಿರುವನ್ನು ಪಡೆದುಕೊಂಡಿದೆ. ಮುಂದೆ ಇದಕ್ಕೆ ನೀವು ಕೇಳಿದಂತೆ ಕಥೆಯನ್ನು ಮುಂದುವರಿಸುವ ಬಗ್ಗೆ ಕೂಡ ಯೋಚಿಸುತ್ತೇವೆ. ನಮ್ಮ ಉದ್ದೇಶ ವಿಶ್ವ ಮಹಿಳಾ ದಿನದಂದು ಅಂತಹ ವ್ಯಕ್ತಿತ್ವಗಳನ್ನು ಅನಾವರಣ ಮಾಡುವ ಅರ್ಧ ಗಂಟೆಯ ಒಂದು ಕಾರ್ಯಕ್ರಮ ಮಾಡುವುದಷ್ಟೇ ಆಗಿತ್ತು. ಅದೂ ಸಾಧ್ಯ ಆಗಲಿಲ್ಲ. ಏಕೆಂದರೆ, ಒಬ್ಬರಿಗೊಬ್ಬರ ಸಮಯದ ಹೊಂದಾಣಿಕೆ ಆಗಲಿಲ್ಲ. ಹಾಗಾಗಿ ನಮ್ಮ ಸಾಮಾಜಿಕ ಮಾಧ್ಯಮಗಳಲ್ಲಿ ಅದನ್ನು ಬಿತ್ತರಿಸಿದ್ದೇವೆ. ಇನ್ನೂ ನಾಲ್ಕು ಮಂದಿಯ ಕಥೆಯನ್ನು ಬಿತ್ತರಿಸಬೇಕಿದೆ. ಎಲ್ಲರದ್ದೂ ಭಿನ್ನ ಕಥೆ. ಅದು ಧಾರಾವಾಹಿ ಜೊತೆ ಬೆರೆಸಿದರೆ ಜನರೂ ಖುಷಿ ಪಡುತ್ತಾರೆ. ಈಗಿನ ಕಥೆಯ ಹರವು ಒಂದು ರೀತಿ ಇದೆ. ಮುಂದೆ ಅದು ಭಿನ್ನ ಆಗುತ್ತದೆ. ಒಂದು ವೇಳೆ ವಾಸ್ತವ ಸತ್ಯ ಘಟನೆಗಳನ್ನು ಪರಿಚಯಿಸಿದರೆ ಅದು ಹೀಗೆ ಬರುತ್ತದೆ ಎಂದು ಈಗಲೇ ಹೇಳಲು ಆಗುವುದಿಲ್ಲ. ಸ್ಕ್ರಿಪ್ಟ್ ಬರೆಯುವ ಸಂದರ್ಭ ಅದನ್ನು ನಿರ್ಧರಿಸುತ್ತದೆ. ಆಟೊರಾಣಿ ಮಾತನಾಡಿಸಲು 'ಸತ್ಯ' ಮೈಸೂರಿಗೆ ಹೋಗಿಯೂ ಬರಬಹುದು. ಇಲ್ಲ ಅವರನ್ನೇ ತೆರೆಗೆ ಕರೆತರಬಹುದು ಗೊತ್ತಿಲ್ಲ.

◆ **ರಿಯಲ್ ಸ್ಟೋರಿಗಳನ್ನು ತೆರೆಗೆ ತರುವಾಗ ಸಾಮಾನ್ಯವಾಗಿ ಎದುರಾಗುವ ಸಮಸ್ಯೆ ಏನು?**

ವಾಸ್ತವದ ಸಂಶೋಧನಾ ಕಥೆಯನ್ನು ಮಾಧ್ಯಮದ ಸೃಜನಶೀಲ ಕಥೆಯನ್ನಾಗಿ ರೂಪಿಸುವ ಸಂದರ್ಭದಲ್ಲಿ ಸಣ್ಣ ವ್ಯತ್ಯಾಸ ಮಾಡಿಕೊಳ್ಳಬೇಕಾಗುತ್ತದೆ. ಯಾವುದೇ ಸಿನಿಮಾ ಕೂಡ ರಿಯಲ್ ಸ್ಟೋರಿ ಅಥವಾ ನೈಜ ಕಥೆ ಎಂದು ಹೇಳಿದರೂ ಚಿತ್ರಕಥೆಯಾಗಿ ರೂಪಿಸುವಾಗ ಅನೇಕ ರೂಪಾಂತರಗಳನ್ನು ಮಾಡಬೇಕಾಗುತ್ತದೆ. ಅದಕ್ಕೆ ಅದರದ್ದೇ ಆದ ಬೇರೆ ಬೇರೆ ಕಾರಣಗಳು ಇರಬಹುದು. ಆಟೊ ಸೌಮ್ಯಕತೆಯ ಕೇಂದ್ರವನ್ನು ಮುಟ್ಟಲು ನಮ್ಮ ತಂಡ ನಾಲ್ಕು ದಿನ ಮೈಸೂರಿನಲ್ಲಿ ಉಳಿದುಕೊಂಡು ಶೋಧಿಸಿದೆ. ಗುರುತಿಸದ್ದನ್ನು ವಿಶ್ಲೇಷಿಸಿ ಸಂಸ್ಕರಿಸಿ ಪ್ರಕಟಿಸಬೇಕಾಗುತ್ತದೆ. ಸಂಶೋಧನೆಯನ್ನು ಕಲಾತ್ಮವಾಗಿ ನೀಡಬೇಕಾಗುತ್ತದೆ. ಅಲ್ಲಿ ಒಂದಿಷ್ಟು ಕುಸುರಿ ಕೆಲಸ ಆಗುತ್ತದೆ.

■ **ರಾಘವೇಂದ್ರ ಕೆ.**